## ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.

## ಎಸ್.ಸಿ ಸಂಖ್ಯೆ:- 1/2026

| | | |
|---|---|---|
| **ಸಾಕ್ಷಿದಾರನ ಹೆಸರು** | : ಕೆ.ಎಸ್. ಭಾಸ್ಕರ್ | **ಪಿ.ಡಬ್ಲ್ಯೂ:- 1** |
| **ತಂದೆಯ ಹೆಸರು** | : ಲೇಟ್ ಸೀತಪ್ಪ | **ಸಿ.ಡಬ್ಲ್ಯೂ:- 1** |
| **ವಯಸ್ಸು** | : 61 ವರ್ಷ | |
| **ಉದ್ಯೋಗ** | : ನಿವೃತ್ತ ಪಿ.ಎಸ್.ಐ | |
| **ವಾಸಸ್ಥಳ** | : ನಂಜನಗೂಡು. | |

**ಸಾಕ್ಷಿಯನ್ನು ಈ ದಿನ ದಿ:29.06.2026 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ:- ಮಾನ್ಯ ಸರ್ಕಾರಿ ಅಭಿಯೋಜಕರಿಂದ:-**

**1.** ನಾನು ಮೇ-2025 ರಿಂದ ಮೇ-2026 ರವರೆಗೆ ನಂಜನಗೂಡು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪಿ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

**2.** ದಿ:-18.09.2025 ರಂದು ಮೃತ ಶಿವಕುಮಾರಿ ಕಾಣೆಯಾಗಿರುವ ಬಗ್ಗೆ ಅವರ ತಾಯಿ ದೂರು ನೀಡಿದ್ದು, ದೂರನ್ನು ಎ.ಎಸ್.ಐ ಶಿವಕುಮಾರ್ ಎಂಬುವವರು ಪಡೆದು ಪ್ರಕರಣ ದಾಖಲಿಸಿಕೊಂಡರು. ನಂತರ ಮುಂದಿನ ತನಿಖೆಯನ್ನು ನಾನು ಕೈಗೊಂಡು ಕಾಣೆಯಾಗಿರುವ ಬಗ್ಗೆ ನೀಡಿದ ದೂರಿನಲ್ಲಿ ಕಿರಣ್ ಎನ್ನುವವರ ಮೇಲೆ ಅನಮಾನವಿರುತ್ತದೆ ಎಂದು ದೂರು ಇದ್ದು, ನಂತರ ನಾನು ಸಿಬ್ಬಂದಿಗಳ ಸಮೇತ ಕಿರಣ ಎಂಬುವವರನ್ನು ಠಾಣೆಗೆ ಬರಮಾಡಿಕೊಂಡು ಕಾಣೆಯಾಗಿರುವ ದೂರಿನ ಬಗ್ಗೆ ಕೂಲಂಕುಷವಾಗಿ ವಿಚಾರಣೆ ಮಾಡಿದಾಗ, ಕಿರಣ್ ಎಂಬುವವರು ಶಿವಕುಮಾರಿ ಮತ್ತು

ನಾನು ಕಳೆದ 8 ತಿಂಗಳಿನಿಂದ ಸಾಂದಾರ ಎಂಬ ಕಂಪನಿಯಲ್ಲಿ ಕೆಲಸ ಮಾಡಿಕೊಂಡಿದ್ದು, ಇಬ್ಬರು ಒಂದೇ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದು, ಪರಸ್ಪರ ಪರಿಚಯವಾಗಿ ನಂತರ ನನ್ನ ಮೋಟರ್ ಬೈಕಿನಲ್ಲಿ ಎಲ್ಲಾ ಕಡೆ ಸುತ್ತಾಡಿಸಿ, ಇಬ್ಬರ ನಡುವೆ ಪ್ರೇಮ ಉಂಟಾಗಿ ದೈಹಿಕ ಸಂಪರ್ಕ ಹೊಂದಿರುವುದಾಗಿ ಹೇಳಿದ. ನಂತರ ಕಿರಣ್ ನ ಹೆಂಡತಿ ಪ್ರೆಗ್ನೆಟ್ ಆಗಿದ್ದು, ಅವಳ ತಪಾಸಣೆ ಮಾಡಿಸಲು ಒಂದು ದಿನ ರಜೆ ಹಾಕಿದ್ದು, ಶಿವಕುಮಾರಿ ನನಗೆ ತಿಳಿಸದೇ ರಜೆ ಹಾಕಿ ಹೋಗಿದ್ದೀಯಾ ಎಂದು ಪ್ರಶ್ನೆ ಮಾಡಿದ್ದು, ನಿನ್ನ ಹೆಂಡತಿಯನ್ನು ಸಾಯಿಸಿಬಿಡು, ನಾನು ಮತ್ತು ನನ್ನ ಮಗ ನಿನ್ನ ಜೊತೆಯಲ್ಲಿ ಬಂದು ಉಳಿದುಕೊಳ್ಳುತ್ತೇವೆ ಎಂದು ತೊಂದರೆ ಕೊಟ್ಟಿದ್ದು, ಆ ವಿಚಾರವಾಗಿ ದಿಃ-16.09.2025 ರಂದು ಕಿರಣ್ ಎಂಬುವವನು ಕಾರ್ಖಾನೆ ಕೆಲಸಕ್ಕೆ ಹೋಗಿದ್ದು, ಬೆಳಿಗ್ಗೆ 11 ಗಂಟೆಗೆ ಅನುಮತಿ ಪಡೆದು ವಾಪಸ್ಸು ಬಂದು ಪುನಃ ಸಂಜೆ 5.30 ಗಂಟೆಗೆ ಕಂಪನಿ ಬಿಡುವ ಸಮಯಕ್ಕೆ ಹೋಗಿ ಶಿವಕುಮಾರಿಯನ್ನು ತನ್ನ ಬೈಕಿನಲ್ಲಿ ಕರೆದುಕೊಂಡು ಇಂಡಸ್ಟ್ರೀಯಲ್ ಏರಿಯಾದ ಹದಿನಾರುಗ್ರಾಮಕ್ಕೆ ಹೋಗುವ ರಸ್ತೆಯಲ್ಲಿ ಎಣ್ಣೆಹೊಳೆ ಕಾಲುವೆ ಬಳಿ ಶಿವಕುಮಾರಿಯನ್ನು ಮಾತನಾಡೋಣ ಬಾ ಎಂದು ಕರೆದುಕೊಂಡು ಹೋಗಿ ಅಲ್ಲೇ ಕೊಲೆ ಮಾಡಿ ಬಿಸಾಡಿರುತ್ತೇನೆ ಎಂದು ವಿಚಾರಣಾ ಕಾಲಕ್ಕೆ ತಿಳಿಸಿದ್ದ. ಈ ಸಂಬಂಧ ನಾನು ಸ್ವ ವ ವರದಿ ತಯಾರಿಸಿ ಪೊಲೀಸ್ ಇನ್ಸಪೆಕ್ಟರ್ ರವರಿಗೆ ಮುಂದಿನ ಕ್ರಮಕ್ಕಾಗಿ ಸಲ್ಲಿಸಿದ್ದೆ.

**3.** ಈಗ ನಾನು ನೋಡುತ್ತಿರುವ ದಾಖಲೆ ಸ್ವ ವ ವರದಿ ಇದ್ದು, ಅದರಲ್ಲಿ ನನ್ನ ಸಹಿ ಇದೆ. ಸದರಿ ದಾಖಲೆಯನ್ನು ನಿಶಾನೆ ಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಶಾನೆ ಪಿ-1(ಎ) ಎಂದು ಗುರುತಿಸಿದೆ.

**4.** ಈಗ ನಾನು ನೋಡುತ್ತಿರುವ ದಾಖಲೆ ಜಯಮ್ಮರವರು ಕೊಟ್ಟ ಕಾಣೆಯಾದ ಬಗ್ಗೆ ದೂರು ಇದೆ. ಸದರಿ ದೂರನ್ನು ಅದನ್ನು ನಿಶಾನೆ ಪಿ–2 ಎಂದು ಗುರುತಿಸಿದೆ.

**5.** ನಿಶಾನೆ ಪಿ–1 ರಂತೆ ವರದಿ ಸಲ್ಲಿಸಿದಾಗ, ಆರೋಪಿ ಕಿರಣ್ ಇವರನ್ನು ಸಹ ಅವರ ವಶಕ್ಕೆ ಕೊಟ್ಟಿದ್ದೆ. ದಿಃ– 19.09.2025 ರಂದು ಕೃತ್ಯ ನಡೆದ ಸ್ಥಳಕ್ಕೆ ಆರೋಪಿ ಮತ್ತು ಪಂಚಾಯ್ತಿದಾರರು, ತನಿಖಾಧಿಕಾರಿಗಳು ಸ್ಥಳ ಮಹಜರ್ ಮಾಡಲು ಕೃತ್ಯ ನಡೆದ ಸ್ಥಳಕ್ಕೆ ಬೇಟಿ ನೀಡಿದ್ದು, ಆ ಕಾಲಕ್ಕೆ ನಾನು ಸಹ ತನಿಖಾಧಿಕಾರಿ ಜೊತೆ ಹೋಗಿದ್ದೆ. ಆ ಕಾಲಕ್ಕೆ ಹದಿನಾರು ಗ್ರಾಮಕ್ಕೆ ಹೋಗುವ ಎಣ್ಣೆಹೊಳೆ ಕಾಲುವೆ ಬಳಿ ಇದ್ದ ಸ್ಥಳಕ್ಕೆ ಆರೋಪಿ ಕರೆದಕೊಂಡು ಹೋಗಿದ್ದ. ಆ ಸ್ಥಳದಲ್ಲಿ ಚಾನಲ್ ನ ನೀರು ಹರಿಯುವ ಸ್ಥಳದ ಬದಿಯಲ್ಲಿ ಒಂದು ಹೆಂಗಸಿನ ಶವ ಇತ್ತು. ಆ ಕಾಲಕ್ಕೆ ಶವದ ಬಳಿ ಇದ್ದ ಒಂದು ಕಲ್ಲು, ಒಂದು ವ್ಯಾನಿಟಿ ಬ್ಯಾಗ್, ವ್ಯಾನಿಟಿ ಬ್ಯಾಗ್ ನಲ್ಲಿದ್ದ 2 ಎಟಿಎಂ ಕಾರ್ಡ್ ಗಳು, ಒಂದು ಚುನಾವಣ ಗುರುತಿನ ಚೀಟಿ, ಒಂದು ಬಟ್ಟೆ(ಏಪ್ರಾನ್ ಬಟ್ಟೆ) ಯನ್ನು ಅಮಾನತ್ತುಪಡಿಸಿಕೊಂಡಿದ್ದರು.

**6.** ಕಲ್ಲನ್ನು **FSL** ನ ಅಧಿಕಾರಿಗಳು ಸೀಜ್ ಮಾಡಿ ಕೊಟ್ಟಿದ್ದರು. ಆ ಕಾಲಕ್ಕೆ ಲಾ ಅಂಡ್ ಆರ್ಡರ್ ಸಮಸ್ಯೆ ಉಂಟಾಗಿದ್ದರಿಂದ ಇನ್ಸಪೆಕ್ಟರ್ ರವರು ನನ್ನನ್ನು ಪಕ್ಕಕ್ಕೆ ಕಳುಹಿಸಿದ್ದರು. ಆದ್ದರಿಂದ ನಾನು ಮಹಜರಿಗೆ ಸಹಿ ಹಾಕಿಲ್ಲ. ಆ ದಿನ ಅಮಾನತ್ತು–ಪಡಿಸಿಕೊಂಡ ವಸ್ತುಗಳನ್ನು ನೋಡಿದರೆ ಗುರುತಿಸುತ್ತೇನೆ. ಕೋರ್ಟ್ ಮುಂದಿರುವ ಆರೋಪಿ ಆ ದಿನ ನಾನು ವಿಚಾರಣೆ ಮಾಡಿದಾಗ ಕೊಲೆ ಮಾಡಿದ್ದಾಗಿ ಒಪ್ಪಿಕೊಂಡಿದ್ದ ಕಿರಣ್ ಇರುತ್ತಾನೆ.

**7.** ಈಗ ನಾನು ನೋಡುತ್ತಿರುವ ಒಂದು ಕಲ್ಲು, ಒಂದು ವ್ಯಾನಿಟಿ ಬ್ಯಾಗ್, ವ್ಯಾನಿಟಿ ಬ್ಯಾಗ್ ನಲ್ಲಿರುವ 2 ಎಟಿಎಂ ಕಾರ್ಡ್ ಗಳು, ಒಂದು ಚುನಾವಣ ಗುರುತಿನ ಚೀಟಿ, ಒಂದು ಬಟ್ಟೆ (ಏಪ್ರಾನ್ ಬಟ್ಟೆ) ಆ ದಿನ ಆರೋಪಿ ಸ್ಥಳವನ್ನು ತೋರಿಸಿದಾಗ ಅಮಾನತ್ತುಪಡಿಸಿಕೊಂಡ ವಸ್ತುಗಳಿವೆ. ಕಲ್ಲನ್ನು ಎಂ.ಒಃ–1 ಎಂದು, ವ್ಯಾನಿಟಿ ಬ್ಯಾಗನ್ನು ಎಂ.ಒಃ–2 ಎಂದು, 2 ಎಟಿಎಂ ಕಾರ್ಡ್ ಗಳು, ಚುನಾವಣೆ ಗುರುತಿನ ಚೀಟಿ ಮತ್ತು ಏಪ್ರಾನ್ ಬಟ್ಟೆಯನ್ನು ಎಂ.ಒಃ–2(ಎ) ರಿಂದ 2(ಡಿ) ಎಂದು ಗುರುತಿಸಿದೆ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಪಿ.ಕೆ ವಕೀಲರಿಂದಃ–</u>**

**8.** ಎ.ಎಸ್.ಐ ಶಿವಕುಮಾರ್ ರವರಿಂದ ಮುಂದಿನ ತನಿಖೆಯನ್ನು ವಹಿಸಿಕೊಂಡಿದ್ದೆ. ನಾನು ತನಿಖೆ ವಹಿಸಿಕೊಂಡಾಗ ಕಿರಣನೇ ಕೊಲೆ ಮಾಡಿದ್ದಾನೆ ಎಂದು ದೂರು ಇರಲಿಲ್ಲ ಎಂದರೆ ಕಿರಣನ ಮೇಲೆ ಅನುಮಾನ ಇದೆ ಎಂದು ದೂರಿನಲ್ಲಿ ನಮೂದಿಸಿದ್ದರು.

**9.** ದೂರಿನಲ್ಲಿ ಕೊಲೆ ಮಾಡಿರಬಹುದು ಎಂದು ನಮೂದಿಲ್ಲ ಎಂದರೆ ನಿಜ. ನನ್ನ ಮುಂದೆ ಆರೋಪಿ ಕೊಲೆ ಮಾಡಿದ್ದಾನೆ ಎಂದು ಯಾರು ಸಹ ದೂರು ನೀಡಿಲ್ಲ ಮತ್ತು ಹೇಳಿಕೆ ಕೊಟ್ಟಿಲ್ಲ ಎಂದರೆ ನಿಜ. ಕಾಣೆಯಾದ ಬಗ್ಗೆ ದೂರು ನೀಡಿದಾಗ ಮೃತ ಶಿವಕುಮಾರಿಗೆ 2 ಮದುವೆಯಾದ ಬಗ್ಗೆ ನನ್ನ ಗಮನಕ್ಕೆ ಬಂದಿತ್ತು ಎಂದರೆ ಸರಿಯಲ್ಲ.

**10.** ಜಯಮ್ಮ ಇವರ ದೂರಿನಲ್ಲಿ ಶಿವಕುಮಾರಿಯ ಕೈ ಮೇಲೆ ಮಂಜು ಎಂದು ಹಚ್ಚೆ ಹಾಕಿರುವ ಬಗ್ಗೆ ನಮೂದು ಇದೆ ಎಂದರೆ ನಿಜ. ಆ ಮಂಜು ಯಾರು ಎಂದು ನಾನು ತನಿಖೆ ಮಾಡಿಲ್ಲ. ನಾನು ತನಿಖೆ ವಹಿಸಿಕೊಳ್ಳುವವರೆಗೆ ಬೇರೆ ಯಾವುದೇ ವ್ಯಕ್ತಿಯ ಹೇಳಿಕೆಯನ್ನು ಪಡೆದಿರುವುದಿಲ್ಲ.

**11.** ನನಗಿಂತ ಮುಂಚೆ ಆರೋಪಿ ಕಿರಣನ ಹೇಳಿಕೆಯನ್ನು ಬೇರೆ ಯಾರು ಪಡೆದಿಲ್ಲ. ದಿಃ–19.09.2025 ರಂದು ಬೆಳಗಿನ ಜಾವ 0.30 (ಮಧ್ಯರಾತ್ರಿ) ಗಂಟೆಗೆ ನಾನು ವರದಿಯನ್ನು ಪೊಲೀಸ್ ಇನ್ಸಪೆಕ್ಟರ್ ರವರಿಗೆ ಸಲ್ಲಿಸಿದ್ದೆ. ವಿಚಾರಣಾ ಕಾಲಕ್ಕೆ ಆರೋಪಿಯೇ 3 ತಿಂಗಳ ಹಿಂದೆ ತನ್ನ ಹೆಂಡತಿಯನ್ನು ವೈಧ್ಯಕೀಯ ತಪಾಸಣೆಗೆ ಕರೆದುಕೊಂಡು ಹೋಗಿದ್ದ ಬಗ್ಗೆ ಹೇಳಿದ್ದ. ನಾನೇ ಆರೋಪಿಯನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದಿದ್ದೆ.

**12.** ಆರೋಪಿ ಹೇಳಿಕೆ ಕೊಡುವಾಗ ಶಿವಕುಮಾರಿಗೆ ಮೊದಲಿಗೆ ಕೊತ್ತೆಗಾಲದ ರಮೇಶನೊಂದಿಗೆ ಮದುವೆ ಆಗಿತ್ತು, ಆತನ ಮರಣದ ನಂತರ ಅವರ ತಮ್ಮ ಮಂಜುನೊಂದಿಗೆ ಮದುವೆ ಆಗಿತ್ತು ಎಂದು ನನಗೆ ಗೊತ್ತಾಗಿರಲಿಲ್ಲ.

**13.** ಶಿವಕುಮಾರಿಗೆ ಮೊದಲಿಗೆ ಕೊತ್ತೆಗಾಲದ ರಮೇಶನೊಂದಿಗೆ ಮದುವೆ ಆಗಿತ್ತು, ಅನಾರೋಗ್ಯದಿಂದ ಆತ ಮರಣ ಹೊಂದಿದ ಬಳಿಕ ಅವರ ತಮ್ಮ ಮಂಜುನೊಂದಿಗೆ ಮದುವೆ ಆಗಿತ್ತು, ಸ್ವಲ್ಪ ದಿನ ಅವನೊಂದಿಗೆ ಸಂಸಾರ ಮಾಡಿದ ಬಳಿಕ ಸರಿ ಹೊಂದದ ಕಾರಣ ಶಿವಕುಮಾರಿ ರಮಾಬಾಯಿ ನಗರ ತನ್ನ ತಾಯಿಯ ಮನೆಯಲ್ಲಿ ವಾಸವಾಗಿದ್ದಳು ಎಂದು ನನ್ನ ಗಮನಕ್ಕೆ ಬಂದಿತ್ತು ಎಂದರೆ ಸರಿಯಲ್ಲ. ಶಿವಕುಮಾರಿಗೆ ಮತ್ತು ಅವರ 2 ನೇ ಗಂಡ ಚಾ.ಸಾಃ21 ಮಂಜುಗು ವೈಮನಸ್ಸು ಇತ್ತು ಎನ್ನುವ ಬಗ್ಗೆಯೂ ಸಹ ನನ್ನ ಗಮನಕ್ಕೆ ಬಂದಿತ್ತು ಎಂದರೆ ಸರಿಯಲ್ಲ. ಆ ಬಗ್ಗೆ ಗೊತ್ತಾದಾಗಲೂ ಸಹ ನಾನು ಆ ಕುರಿತು ತನಿಖೆ ಕೈಗೊಂಡಿಲ್ಲ ಎಂದರೆ ಸರಿಯಲ್ಲ. ಆರೋಪಿ ವಿರುದ್ಧ ಅನಮಾನ ಇದೆ ಎಂದು ಸುಳ್ಳು ವರದಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**14.** ಕೃತ್ಯ ಸ್ಥಳಕ್ಕೆ ತನಿಖಾಧಿಕಾರಿ, ಆರೋಪಿ, ಪಂಚಾಯ್ತಿದಾರರು, ಸಿಬ್ಬಂದಿಗಳು ಮತ್ತು ನಾನು ಹೋಗಿದ್ದೆವು. ಆ ಕಾಲಕ್ಕೆ ರವಿ ಮತ್ತು ಸಿದ್ದರಾಜು ಎನ್ನುವ ಪಂಚಾಯ್ತಿದಾರರು ಹಾಜರಿದ್ದರು. ಸ್ಥಳ ಮಹಜರ್ ಮಾಡಿದ ಸ್ಥಳದ ಸುತ್ತ–ಮುತ್ತ ಬಹಳಷ್ಟು ಫ್ಯಾಕ್ಟರಿ ಇದೆ ಎಂದರೆ ಸರಿಯಲ್ಲ. ಅಲ್ಲಿ ಕೇವಲ ತ್ರಿವೇಣಿ ಅನ್ನುವ ಫ್ಯಾಕ್ಟರಿ ಇದೆ. ಅಲ್ಲಿ ಡಬಲ್ ರಸ್ತೆ ಇದೆ ಎಂದರೆ ನಿಜ. ಅಲ್ಲಿ ತುಂಬಾ ವಾಹನಗಳು ಓಡಾಡುತ್ತವೆ ಎಂದರೆ ಸರಿಯಲ್ಲ. ಫ್ಯಾಕ್ಟರಿ ಬಳಿ ಟೀ ಶಾಪ್ ಇದೆ ಎಂದರೆ ಸರಿಯಲ್ಲ. ಅಲ್ಲಿ ಸ್ಥಳೀಯರು ಲಭ್ಯವಿದ್ದಾಗಲೂ ಅವರನ್ನು ಪಂಚರಾಗಿ ಕರೆದಿಲ್ಲ ಎಂದರೆ ಆ ಬಗ್ಗೆ ತನಿಖಾಧಿಕಾರಿಗೆ ಗೊತ್ತು. ಆ ಸ್ಥಳದಲ್ಲಿ ಮಾಡುವ ಕಾಲಕ್ಕೆ ನಾನು ಹಾಜರಿರಲಿಲ್ಲ ಎಂದರೆ ಸರಿಯಲ್ಲ. ನಾನು ಆ ಸ್ಥಳಕ್ಕೆ ಹೋಗಿಲ್ಲವಾದ್ದರಿಂದ ಮಹಜರಿನಲ್ಲಿ ನನ್ನ ಸಹಿ ಇಲ್ಲ ಎಂದರೆ ಸರಿಯಲ್ಲ. ತನಿಖಾಧಿಕಾರಿಯ ಆದೇಶದಂತೆ ಆರೋಪಿಯೇ ಕೊಲೆ ಮಾಡಿದ್ದಾನೆ ಎಂದು ವರದಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಬೇರೆ ವ್ಯಕ್ತಿಗಳನ್ನು ಪ್ರಕರಣದಿಂದ ಹೊರಗಿಡುವ ಸಲುವಾಗಿ ಆರೋಪಿ ಕೊಲೆ ಮಾಡಿದ್ದಾನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ– ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)

**ಓ ಹೇ ಕೇ ಸ ಇ ಎ ಒ**

**Sd/-**

**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,**
**ಮೈಸೂರು.**